## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 510/2023

**ಸಾಕ್ಷಿಯನ್ನು ದಿಃ 06.02.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಕವಿತಾ ಎನ್ | ಸಿಡಬ್ಲ್ಯೂ:6 | ಪಿಡಬ್ಲ್ಯೂ:5 |
| ಗಂಡನ ಹೆಸರು | ಸ್ವಾಮಿ ಡಿ | | |
| ವಯಸ್ಸು | 36 ವರ್ಷ | | |
| ಉದ್ಯೋಗ | ಗ್ರಂಥಾಲಯ ಮೇಲ್ವಿಚಾರಕಿ | | |
| ವಾಸಸ್ಥಳ | ಕಟ್ಟೆಮಳಲವಾಡಿ | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನನಗೆ ಚಾಸಾ 1 ರಿಂದ 5, 7 ಮತ್ತು 8 ಗೊತ್ತು. ಮೃತ ಜ್ಯೋತಿ ಮತ್ತು ಮೃತ ನಾಗಯ್ಯ ಗೊತ್ತು. ನಾಗಯ್ಯ ಮತ್ತು ಜ್ಯೋತಿ ಒಂದು ರಸ್ತೆ ಅಪಘಾತದಲ್ಲಿ ಮೃತ ಪಟ್ಟರು. ದಿನಾಂಕ 27.06.2022 ರಂದು ಮಂಡ್ಯದಲ್ಲಿ ಗ್ರಂಥಾಲಯ ಮೇಲ್ವಿಚಾರಕ ಸಭೆ ಇತ್ತು. ಸದರಿ ಸಭೆಯಲ್ಲಿ ಭಾಗವಹಿಸಲು ಒಟ್ಟು 16 ಜನ ಹೋಗಿದ್ದೆವು. ವಾಪಸ್ಸು ಅದೇ ದಿನ ಬರುವಾಗ ನಾನು, ಚಾಸಾ 1 ರಿಂದ 5, 7 ಮತ್ತು 8 ಮತ್ತು ಮೃತ ನಾಗಯ್ಯ ಹಾಗೂ ಜ್ಯೋತಿ ಇದ್ದೆವು. ರಾತ್ರಿ 8 ಗಂಟೆಗೆ ನಾವು ವಾಪಸ್ಸು ಟೆಂಪೋದಲ್ಲಿ ಊರಿಗೆ ಬರುತ್ತಿದ್ದೆವು. ನಾವು ಮಲ್ಲಿನಾಥಪುರ ಊರಿನಲ್ಲಿ ಬರುತ್ತಿದ್ದಾಗ ಹುಣಸೂರು ಕಡೆಯಿಂದ ಕೆ ಎಸ್ ಆರ್ ಟಿ ಸಿ ಬಸ್ ಬರುತ್ತಿತ್ತು. ನಮ್ಮ ವಾಹನದ ಚಾಲಕ ಟೆಂಪೋವನ್ನು ಅಡ್ಡಾದಿಡ್ಡಿಯಾಗಿ ವೇಗವಾಗಿ ಚಲಾಯಿಸಿಕೊಂಡು ಬಂದು ಕೆ ಎಸ್ ಆರ್ ಟಿ ಸಿ ಬಸ್ ಗೆ ಡಿಕ್ಕಿಪಡಿಸಿ ಅಪಘಾತವಾಯಿತು. ನಾಗಯ್ಯರವರು ಸ್ಥಳದಲ್ಲಿಯೇ ಮೃತಪಟ್ಟರು. ಎರಡು ದಿನದ ನಂತರ ಜ್ಯೋತಿ ಮೈಸೂರಿನ ಬೃಂದಾವನ ಆಸ್ಪತ್ರೆಯಲ್ಲಿ ಚಿಕಿತ್ಸೆಫಲಕಾರಿಯಾಗದೆ ಮೃತಪಟ್ಟರು. ನನಗೆ ಕಣ್ಣು, ಬಲಗೈ, ಬಲಕಾಲಿಗೆ ಏಟಾಯಿತು. ನಾನು ಮೈಸೂರಿನ ಕೆ ಆರ್ ಎಸ್ ಮತ್ತು ಪ್ರಹಲಾಕ್ಷ ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆದುಕೊಂಡಿದ್ದೇನೆ. ಅಪಘಾತವು

ಟೆಂಪೋ ಚಾಲಕನ ತಪ್ಪಿನಿಂದಾಗಿದೆ. ಟೆಂಪೋ ಚಲಾಕನನ್ನು ನೋಡಿದ್ದೇನೆ. ಈ ದಿನ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ನಾವು ಆ ದಿನ ಪ್ರಯಾಣಿಸುತ್ತಿದ್ದ ಟೆಂಪೋ ಮತ್ತು ಮುಂದಿನಿಂದ ಬರುತ್ತಿದ್ದ ಬಸ್ ನ್ನು ನೋಡಿದರೆ ಗುರುತಿಸುತತ್ತೇನೆ. ಸಾಕ್ಷಿ ನಿಪಿ 3 ರಿಂದ 11 ರ ಭಾವಚಿತ್ರಗಳಲ್ಲಿ ಟೆಂಪೋ ಮತ್ತು ಬಸ್ ನ್ನು ನೋಡಿ ಗುರುತಿಸುತ್ತಾರೆ. ನಾವು ಪ್ರಯಾಣಿಸುತ್ತಿದ್ದ ಟೆಂಪೋ ಮತ್ತು ಬಸ್ಸಿನ ಸಂಖ್ಯೆ ನೆನಪಿಲ್ಲ. ನಾನು ಅಪಘಾತದ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀಸವಾಲು ಸಸಅ ರವರಿಂದಃ–**

ಆ ದಿನ ನಾವು ಪ್ರಯಾಣಿಸುತ್ತಿದ್ದ ಟೆಂಪೋ ಟ್ರಾವೆಲರ್ಸ್ ಸಂಖ್ಯೆ ಕೆಎ–12–ಎ–6816 ಎಂದರೆ ಸರಿ. ಕೆ ಎಸ್ ಆರ್ ಟಿ ಸಿ ಬಸ್ ಸಂಖ್ಯೆ ಕೆಎ–09–ಎಫ್–5132 ಎಂದರೆ ಸರಿ. ದಿನಾಂಕ 30.06.2022 ರಂದು ಬೆಳಿಗ್ಗೆ 5.46 ಗಂಟೆಗೆ ಜ್ಯೋತಿರವರು ಮೃತಪಟ್ಟರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಕೀಲರಿಂದಃ**

ನಾನು ಈಗಲೂ ಗ್ರಂಥ ಪಾಲಕಿಯಾಗಿ ಕೆಲಸ ಮಾಡುತ್ತಿದ್ದೇನೆ. ಪರಿಹಾರ ಕೋರಿ ಮೈಸೂರು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದೇನೆ. ನಾನು ಇದೇ ಮೊದಲ ಬಾರಿಗೆ ಹೇಳಿಕೆ ನೀಡುತ್ತಿದ್ದೇನೆ. ಆ ದಿನ ನನ್ನನ್ನು 108 ಆ್ಯಂಬುಲೆನ್ಸ್ ನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ನಾನು 3 ನೇ ಸೀಟ್ ನಲ್ಲಿ ಕುಳಿತಿದ್ದೆ. ನನ್ನ ಮುಂದೆ ಚಾಸಾ 5 ರವರು ಕುಳಿತಿದ್ದರು. ಬೇರೆಯವರು ಎಲ್ಲಿ ಕುಳಿತಿದ್ದರು ಎಂದು ಈಗ

ನೆನಪಿಲ್ಲ. ನಾನು ತಲೆ ನೋವು ಬಂದು ವ್ಯಾನ್ ಒಳಗೆ ಮಲಗಿದ್ದೆ. ಅಪಘಾತ ಹೇಗಾಯಿತು ಎಂದು ಗೊತ್ತಾಗಲಿಲ್ಲ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.